

ನಿಯಮಕ್ಕೆ ಅಪವಾದಗಳಿರುತ್ತವೆ ಎನ್ನುವುದನ್ನು ಮರೆಯುವಂತಿಲ್ಲ.

ಹೀಗೆ ಸ್ತ್ರೀಯರು ತಮ್ಮೊಳಗೆ ಹುದುಗಿರುವ ಶಕ್ತಿಯನ್ನು ಗುರುತಿಸಿಕೊಳ್ಳದೆ ಅತೃಪ್ತರಾಗಿದ್ದರೆ ಪುರುಷರು ತಮ್ಮಲ್ಲಿ ಇಲ್ಲದ ಮತ್ತು ಬದುಕಿಗೆ ಅಗತ್ಯವೇ ಇಲ್ಲದ ಶಕ್ತಿಗಳನ್ನು ಆರೋಪಿಸಿಕೊಂಡು ಭ್ರಮೆಯಲ್ಲಿ ಬದುಕುತ್ತಾರೆ. ನಮ್ಮ ವ್ಯಾಪಾರಿ ಸಿನಿಮಾಗಳು ಇದಕ್ಕೆ ಸಿದ್ಧ ಮಾದರಿಗಳನ್ನು ಒದಗಿಸುತ್ತವೆ. ಅನ್ಯಾಯದ ವಿರುದ್ಧ ಹೋರಾಡುತ್ತ ದುಷ್ಟರನ್ನು ಸದೆಬಡಿಯುತ್ತಾ ವಿಜೃಂಭಿಸುವ ನಾಯಕ ಒಂದು ಕಡೆಯಾದರೆ ಅವನನ್ನು ಪ್ರೀತಿಯಿಂದ ತಣಿಸುವ ನಾಯಕಿ ಇನ್ನೊಂದು ಕಡೆ. ಇದಕ್ಕಿಂತ ನಿಚ್ಚಳವಾದ ಚಿತ್ರಣ ಇನ್ನೆಲ್ಲಿ ಸಿಗಲು ಸಾಧ್ಯ?

ಹೀಗೆ ತಗ್ಗಿದ ಆತ್ಮಗೌರವವಿರುವ ಸ್ತ್ರೀ ಮತ್ತು ವೈಭವೀಕೃತ ಆತ್ಮಗೌರವನನ್ನು ತುಂಬಿಕೊಂಡಿರುವ ಪುರುಷರಿಬ್ಬರೂ ತಮ್ಮ ಬದುಕಿನಲ್ಲಿ ಸಹಜ ಸಂಬಂಧಗಳನ್ನು ಕಟ್ಟಿಕೊಳ್ಳುವುದರಲ್ಲಿ ಸೋಲುತ್ತಾರೆ. ಸ್ನೇಹ, ಆತ್ಮೀಯತೆಗಳು ಇವರಿಗೆ ಸುಲಭವಾಗಿ ಸಾಧ್ಯವಾಗುವುದಿಲ್ಲ. ಹಾಗಾಗಿ ಇವರ ವೈವಾಹಿಕ ಜೀವನದಲ್ಲಿ ಹೊಂದಾಣಿಕೆಯನ್ನು ಕಂಡುಕೊಳ್ಳುವುದು ಕಷ್ಟವಾಗುತ್ತದೆ. ತಗ್ಗಿದ ಆತ್ಮಗೌರವವನ್ನು ಹೊಂದಿರುವ ಸ್ತ್ರೀಯರಿಗೆ ಮುಖವಾಡಗಳನ್ನು ಕಳಚಿ ಇನ್ನೊಬ್ಬ ವ್ಯಕ್ತಿಯೆದುರು ತಮ್ಮನ್ನು ತೋರಿಸುವುದರಿಂದ ತಾವು ಕೀಳಾಗಿ ಕಾಣಿಸಿಕೊಳ್ಳುವ ಭಯವಿರುತ್ತದೆ. ಹಾಗಾಗಿ ಅವರು ಆತ್ಮೀಯತೆಯಿಂದ ದೂರವಿರುತ್ತಾರೆ. ಪುರುಷರು ತಮ್ಮೊಳಗಿರುವ ಆತ್ಮೀಯತೆಯ ಹಸಿವನ್ನು  ಅಲ್ಲಗಳೆಯುತ್ತಾ ಹುಸಿ ಗಟ್ಟಿತನ ದೃಢತೆಯನ್ನು ಪ್ರದರ್ಶಿಸುತ್ತಾರೆ. ಇದರಿಂದ ಸಮಾಧಾನ ಸಿಗದಿದ್ದಾಗ ಹಿಂಸೆ ಅಥವಾ ನಶೆಯ ವಸ್ತುಗಳಲ್ಲಿ ಪರಿಹಾರ ಹುಡುಕುತ್ತಾರೆ. ಈ ಎಲ್ಲ ಅಂಶಗಳೂ ಸಾಕಷ್ಟು ಸಂಶೋಧನೆ ಮತ್ತು ಸಮೀಕ್ಷೆಗಳಿಂದ ಸಿದ್ಧವಾಗಿದೆ.

**ಸ್ತ್ರೀಯರು ತಮ್ಮೊಳಗೆ ಹುದುಗಿರುವ ಶಕ್ತಿಯನ್ನು ಗುರುತಿಸಿಕೊಳ್ಳದೆ ಅತೃಪ್ತರಾಗಿದ್ದರೆ ಪುರುಷರು ತಮ್ಮಲ್ಲಿ ಇಲ್ಲದ ಮತ್ತು ಬದುಕಿಗೆ ಅಗತ್ಯವೇ ಇಲ್ಲದ ಶಕ್ತಿಗಳನ್ನು ಆರೋಪಿಸಿಕೊಂಡು ಭ್ರಮೆಯಲ್ಲಿ ಬದುಕುತ್ತಾರೆ.**

ಲೇಖನದ ಪ್ರಾರಂಭದಲ್ಲಿ ಹೇಳಿರುವ ಎರಡು ಉದಾಹರಣೆಗಳು ಮತ್ತು ಮೇಲೆ ನೀಡಿರುವ ವಿವರಣೆ ಅತಿರೇಕದ್ದು ಎಂದು ನಿಮಗನ್ನಿಸಬಹುದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ವಾಸ್ತವವಾಗಿ ನಾವೆಲ್ಲಾ ಈ ಎರಡು ತುದಿಗಳ ಮಧ್ಯೆ ಎಲ್ಲೋ ಇರುತ್ತೇವೆ. ಸಂತೃಪ್ತ ಜೀವನ ನಡೆಸುತ್ತಿರುವ ಹೆಚ್ಚಿನವರ ಮನೆಗಳಲ್ಲಿ ಕೂಡ ಸ್ತ್ರೀಯರು ತಮ್ಮ ಅಗತ್ಯಗಳನ್ನು ಮುಕ್ತವಾಗಿ ಹೇಳಿಕೊಂಡು ಪಡೆದುಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ. ಹಾಗೆಯೇ ಗಂಡಸರಿಗೆ ಹೆಂಡತಿಯೆದುರು ತಮ್ಮ ಅಂತರಂಗವನ್ನು ತೆರೆದಿಟ್ಟು ಹಗುರಾಗುವ ಅಗತ್ಯವಿದೆ ಎನ್ನಿಸುವುದಿಲ್ಲ. ಮಹಿಳೆಯರು ಅನಗತ್ಯವಾಗಿ ಕುಗ್ಗಿಕೊಂಡು ಇರುವುದನ್ನು ಮತ್ತು ಪುರುಷರು ನಕಲಿ ಶ್ಯಾಮನ ದೊಡ್ಡಸ್ತಿಕೆ, ಗಟ್ಟಿತನದ ಭ್ರಮೆಯಲ್ಲಿ ಬದುಕುವುದನ್ನು ನಾವು ಮೈಗೂಡಿಸಿಕೊಂಡಿದ್ದೇವೆ. ಇದರ ಜೊತೆಗೆ ಸಂಬಂಧಗಳನ್ನು ಆತ್ಮೀಯವಾಗಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನವನ್ನೂ ನಡೆಸುತ್ತಿರುತ್ತೇವೆ. ಆದರೆ ಮುಖವಾಡಗಳು ಕಳಚದೆ ಹೃದಯಗಳು ಬೆಸೆಯುವುದು ಸಾಧ್ಯವಿಲ್ಲ ಎಂಬ ಅರಿವು ನಮ್ಮಲ್ಲಿ ಮೂಡಿದಾಗ ಮಾತ್ರ ಸಂಬಂಧಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ.

## ನಾವೇನು ಮಾಡಬಹುದು?

ಲಿಂಗಸಮಾನತೆಗಾಗಿ ಮನೆಯಲ್ಲಿ ಪೋಷಕರು ಮಾಡಬಹುದಾದ್ದೇನು ಅಂತ ನೋಡೋಣ.

- ಲಿಂಗಸಮಾನತೆಗೆ ಪೋಷಕರು ಉತ್ತಮ ಮಾದರಿಗಳಾಬೇಕು. ಅಪ್ಪನೇ ಅಮ್ಮನಿಗೆ ಗೌರವ ಕೊಡದಿದ್ದಾಗ ಮಗನಿಂದ ಇನ್ನೇನನ್ನು ನಿರೀಕ್ಷಿಸಬಹುದು? ಗಂಡಸು ಮಾತ್ರ ದುಡಿಯುವವನಾಗಿದ್ದರೂ ಅವನ ದುಡಿಮೆಯನ್ನು ಕುಟುಂಬದ ಆದಾಯ ಅಂತ ಪರಿಗಣಿಸಿ ಎಲ್ಲರೂ ಸೇರಿ ತೀರ್ಮಾನಗಳನ್ನು ಮಾಡಬೇಕು.
- ಕೌಟುಂಬಿಕ ಹಿಂಸೆ ಮತ್ತು ಕುಟುಂಬದ ಸದಸ್ಯರು ನಶೆಯ ವಸ್ತುಗಳಿಗೆ ಅಂಟಿಕೊಂಡಿರುವುದಕ್ಕೆ ತಕ್ಷಣ ತಜ್ಞರಿಂದ ಪರಿಹಾರ ಹುಡುಕಿಕೊಳ್ಳಬೇಕು. ಇಲ್ಲದಿದ್ದರೆ ಇವು ಮುಂದಿನ ತಲೆಮಾರಿಗೆ ವರ್ಗಾವಣೆಯಾಗುವ